ಬಿ.ಎಂ.ಎಸ್. ತಾಂತ್ರಿಕ ಮತ್ತು ವ್ಯವಸ್ಥಾಪನಾ ಮಹಾವಿದ್ಯಾಲಯ
( ವಿ.ಟಿ.ಯು. ಅಡಿಯಲ್ಲಿನ ಸ್ವಾಯತ್ತ ಸಂಸ್ಥೆ )
BMS INSTITUTE OF TECHNOLOGY & MANAGEMENT
(Autonomous Under VTU)

# ಕನ್ನಡ ರಾಜ್ಯೋತ್ಸವ ನವೆಂಬರ್ 1, 2022

ಬಿ.ಎಂ.ಎಸ್.ಐ.ಟಿ & ಎಂ ಕಾಲೇಜಿನ ಆವರಣದಲ್ಲಿ ನವೆಂಬರ್ 1, 2022 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮುಂಜಾನೆ 9:30 ರ ಸಮಯದಲ್ಲಿ ಧ್ವಜಾರೋಹಣಾ ನಡೆಸಿ ನಾಡಗೀತೆಯನ್ನು ಹಾಡಲಾಯಿತು. ಈ ಸಮಾರಂಭದಲ್ಲಿ ಕಾಲೇಜಿನ ಉಪ-ಪ್ರಾಂಶುಪಾಲರಾದ ಡಾ: ಗೋವಿಂದ ರಾಜು. ಹೆಚ್.ಕೆ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿಯಾದ ಡಾ: ಮಾಲ. ಸಿ.ಎಸ್ ಮತ್ತು ಉಳಿದ ಭೋದಕ ಮತ್ತು ಭೋದಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ ವೃಂದದವರು ಉಪಸ್ಥಿತರಿದ್ದರು.



<u>**ಹೊನ್ನುಡಿ ಕನ್ನಡ ಸಂಘ ಉದ್ಘಾಟಣೆ, ನವೆಂಬರ್ 3, 2022**</u>

ನವೆಂಬರ್ 3 ರಂದು ಯಲಹಂಕ ಬಿ.ಎಂ.ಎಸ್.ಐ.ಟಿ & ಎಂ ಕಾಲೇಜಿನಲ್ಲಿ ಹೊನ್ನುಡಿ  ಎಂಬ ಕನ್ನಡ ಸಂಘವನ್ನು ಖ್ಯಾತ ಕಲಾವಿದ ವಾಗ್ಮಿ, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮತ್ತು ಲೇಖಕರಾದ ಪ್ರೊ.ಕೃಷ್ಣೇ ಗೌಡ ಉದ್ಘಾಟಿಸಿದರು. ದೇಶದ ವಿವಿಧ ಭಾಗಗಳಿಂದ ಇಂಜಿನಿಯರಿಂಗ್ ಓದಲು ಬೆಂಗಳೂರಿಗೆ ಬಂದಿರುವ ವಿದ್ಯಾರ್ಥಿಗಳಲ್ಲಿ ಕನ್ನಡದ ಕಂಪನ್ನು ಪಸರಿಸಲು ಕನ್ನಡ ಸಂಘವನ್ನು ಕಟ್ಟಿರುವುದು ತುಂಬಾ ಸಂತೋಷದ ವಿಷಯ.




ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಇಂಗ್ಲೀಷ್ ಹೆಚ್ಚು ಬಳಕೆಯಾಗುವ ಭಾಷೆಯಾಗಿದೆ. ಇಂತಹ ಕಾಲೇಜುಗಳಲ್ಲಿ ಬೇರೆ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಬಳಸುವ ಬಗ್ಗೆ ಅರಿವು ಮೂಡಿಸುವುದು, ನಮ್ಮ ಸಂಸ್ಕೃತಿಯನ್ನು ಬಿಂಬಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಕನ್ನಡ ಸಂಘದ ಉದ್ದೇಶವಾಗಿದೆ.




ಕಾರ್ಯಕ್ರಮವನ್ನು ಉದ್ದೇಶಿಸಿ ಮಾತಾನಾಡಿದ ಪ್ರೋ.ಕೃಷ್ಣೇ ಗೌಡ ರವರು ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಈ ರೀತಿಯ ಕನ್ನಡ ಸಂಘವನ್ನು ಕಟ್ಟಿದಾಗ ತುಂಬಾ ಸಂತೋಷವಾಗುತ್ತದೆ. ತಮಟೆ, ಚಂಡೆ, ಡೊಳ್ಳು ಕುಣಿತ, ಯಕ್ಷಗಾನ, ಜನಪದದ ಈ ರೀತಿಯಾದ ಸಂಸ್ಕೃತಿಯನ್ನು ಬಿಂಬಿಸುವ ಕನ್ನಡ ಹಬ್ಬವನ್ನು ಹಮ್ಮಿಕೊಂಡಿರುವುದು ಸ್ವಾತಾರ್ಹ ಬೆಳವಣಿಗೆಯಾಗಿದೆ ಎಂದರು. ಕನ್ನಡ ಕೇವಲ ಸಂವಹನ ಮಾಧ್ಯಮವಾಗದೆ ಅದು ನಮ್ಮ ಬದುಕುವ ರೀತಿಯಾಗಿದೆ. ತನ್ನದೇಯಾದ ವಿಶೇಷ ಕಲೆ, ಪರಂಪರೆ, ಸಂಸ್ಕೃತಿಯನ್ನು ಹೊಂದಿದೆ. ಜಾರ್ಜ್ ಬರ್ನಾಡ್ ಶಾ ರವರು ಹೇಳಿದಂತೆ ಕನ್ನಡವು ಅತ್ಯಂತ ತರ್ಕಬದ್ಧ ಬಾಷೆಯಾಗಿದೆ, ವ್ಯಾಕರಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡದ ಸಾಧನೆ ಒಂದು ಮೈಲಿಗಲ್ಲಾಗಿದೆ. ಎಲ್ಲರಿಗೂ ಕನ್ನಡ ಬಾಷೆ ನಿತ್ಯ ಬದುಕಿನಲ್ಲಿ ವ್ಯವಹಿರಸುವ ಭಾಷೆಯಾದರೆ, ಕನ್ನಡಕ್ಕೆ ಅಳಿವೆಂಬುದೇ ಇರುವುದಿಲ್ಲ. ಸರ್ಕಾರದ ಆಡಳಿತ, ಸರ್ಕಾರೇತರ ಕಛೇರಿಗಳಲ್ಲಿ, ಶಾಲಾ ಕಾಲೇಜುಗಳ ಆಡಳಿತದಲ್ಲಿ ಕನ್ನಡ ಭಾಷೆಯು ಹೆಚ್ಚಾಗಿ ಉಪಯುಕ್ತವಾಗಬೇಕು ಎಂದರು. ವಿದ್ಯಾರ್ಥಿಗಳು ಕನ್ನಡೇತರ ಗೆಳೆಯರಿಗೆ ಕನ್ನಡವನ್ನು ಕಲಿಸಿ, ಕನ್ನಡವನ್ನು ಉಳಿಸಬೇಕೆಂದು ಕರೆ ನೀಡಿದರು. ಹಾಸ್ಯದ ಮೂಲಕ ಕನ್ನಡ ಮನೆ ಮಾತಾಗಿರುವ ಕೃಷ್ಣೇ ಗೌಡರು ತಮ್ಮ ಹಾಸ್ಯಭರಿತ ಮಾತುಗಳಿಂದ ವಿದಾರ್ಥಿಗಳಿಗೆ ಕನ್ನಡದ ಪರಂಪರೆಯ ಕಿರುಪರಿಚಯವನ್ನು ಮಾಡಿಕೊಟ್ಟರು.

ನಂತರ ಮಾತನಾಡಿದ ಪ್ರಾಂಶುಪಾಲರಾದ ಡಾ: ಮೋಹನ್ ಬಾಬು.ಜಿ.ಎನ್ ಕನ್ನಡವು ಅತ್ಯಂತ ಶ್ರೀಮಂತ ಬಾಷೆಯಾಗಿದೆ. ಬೇರೆ ಭಾಷೆಗಳ ಪ್ರಾಬಲ್ಯವಿದ್ದರೂ ಎಲ್ಲಾ ಏಳು ಬೀಳುಗಳ ನಡುವೆ ಕನ್ನಡವು ಸಮೃದ್ಧವಾಗಿ ಬೆಳೆದು ನಿಂತಿದೆ, ಎಂದಿಗೂ ಮರೆಯಲಾಗದ ಭಾಷೆಯಾಗಿದೆ. ವಿದ್ಯಾರ್ಥಿಗಳ ನಿತ್ಯ ಬದುಕಿನಲ್ಲಿ ಕನ್ನಡವನ್ನು ಹೆಚ್ಚು ಬಳಸಬೇಕೆಂದು ಕರೆ ನೀಡಿದರು

ಬಿ.ಎಂ.ಎಸ್.ಐ.ಟಿ & ಎಂ ಕಾಲೇಜಿನ ಅಧ್ಯಕ್ಷರಾದ ಶ್ರೀ.ಅವಿರಾಮ್ ಶರ್ಮ ಮಾತಾನಾಡಿ ಹೊನ್ನುಡಿ ಸಂಘಕ್ಕೆ ಶುಭ ಕೋರಿ ವಿದ್ಯಾರ್ಥಿಗಳ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಉಪ-ಪ್ರಾಂಶುಪಾಲರಾದ ದಾ: ಹೆಚ್.ಕೆ.ಗೋವಿಂದ ರಾಜು ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಮುಖ್ಯಾಧಿಕಾರಿ ಡಾ: ಮಾಲ.ಸಿ.ಎಸ್ ಕಾರ್ಯಕ್ರಮ ಸಂಯೋಜಕರಾದ ಡಾ: ಸುನಂದ ದೀಕ್ಷಿತ್, ಪ್ರೊ.ಶೋಭಾ ಮತ್ತು ಪ್ರೊ.ಮನೋಜ್.ಹೆಚ್.ಎಂ ಮತ್ತಿರರು ಉಪಸ್ಥಿತರಿದ್ದರು. ಬಿ.ಎಂ.ಎಸ್.ಐ.ಟಿ & ಎಂ ಕಾಲೇಜಿನ ಹಾಗೂ ಕನ್ನಡ ಜನಪದ ಲೋಕ ರವರ ನಡುವೆಯಾಗಿರುವ ಒಡಂಬಡಿಕೆಯ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕೋಲಾಟ ಮತ್ತು ಕಂಸಾಳೆ ನೃತ್ಯ ಪ್ರಕಾರಗಳ ತರಬೇತಿ ಪಡೆದಿದ್ದು, ಕಾರ್ಯಕ್ರಮದಲ್ಲಿ ಭೋದಕ ಮತ್ತು ಭೋದಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ ವೃಂದದವರು ಅತ್ಯಂತ ಉತ್ಸಾಹದಿಂದ ನೃತ್ಯ, ಹಾಡು, ನಾಟಕ, ಮುಂತಾದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದು, ನೋಡುಗರ ಗಮನ ಸೆಳೆಯಿತು.



